


ಮೂಡಲಕಟ್ಟೆ ದೊಡ್ಡ ಮನೆಯ ಹೊರ ನೋಟ



ಹರ್ಕೂರು ಒಳಗಿನ ಮನೆಯ ಒಳನೋಟ

ಮೂಲೆ ಸೇರಿವೆ.

ಈ ಮನೆಯ 4 ಕಡೆಗಳಲ್ಲಿ ಮೇಲಂತಸ್ತು ಇದ್ದು ಅಲ್ಲಿ ಕೋಣೆಗಳಿವೆ. ಮನೆಯ ವಾರ್ಷಿಕ ಪೂಜೆಯ, ಭೂಮಿ ಪೂಜೆ ಸಮಯದಲ್ಲಿ ಬಳಸಲಾಗುವ ಎಲ್ಲಾ ಉಪಕರಣಗಳನ್ನು ಶೇಖರಿಸಿಡಲು ವಿಶೇಷ ಕೋಣೆಗಳಿವೆ.

ಪೂರ್ವದ ಉತ್ತರ ಮೂಲೆಯಲ್ಲಿ ಜಗುಲಿ ಇದ್ದು ಅಲ್ಲಿಂದ ದಕ್ಷಿಣದ ತುದಿಯ ಅಡುಗೆ ಮನೆಗೆ ಹೋಗಬಹುದು. ಅಲ್ಲಿನ ದಕ್ಷಿಣ ಪಾರ್ಶ್ವದಲ್ಲಿ ಅಡಿಗೆಗೆ ಬಳಸುವ ಸಾಮಾನು, ಹಾಗೂ ಕೃಷಿ ಉತ್ಪನ್ನಗಳನ್ನು ಶೇಖರಿಸಿಡುವ ಗೋದಾಮುಗಳಿವೆ. ಇದರ ಹಿಂದೆ ಎರಡು ಕಿರಿದಾದ ಕೊಠಡಿಗಳಿದ್ದು ಅಲ್ಲಿಂದ ಮನೆಯ ಮುಖ್ಯಸ್ಥರ ಕೋಣೆಯನ್ನು ತಲುಪಬಹುದು. ಈ ಕೋಣೆಯಿಂದ ಮತ್ತು ಪಶ್ಚಿಮ ದಿಕ್ಕಿನ ನೈಋತ್ಯ ಮೂಲೆಯಿಂದ ಮನೆಯ ಚಾವಡಿಯನ್ನು ನೇರವಾಗಿ ತಲುಪಲು ಸಾಧ್ಯವಾಗುವಂತೆ ವಿಶೇಷ ವಿನ್ಯಾಸವಿದೆ.

## ಯರುಕೋಣೆ ಮನೆ

ಮರದ ಹೆಬ್ಬಾಗಿಲನ್ನು ಹೊಂದಿರುವ ಈ ಮನೆಯ ಒಳಗೆ ಹಾಗೂ ಹೊರಗೆ ಹಲವು ಚಾವಡಿಗಳಿವೆ. ಕುಂದಾಪುರ ತಾಲ್ಲೂಕಿನ ಸಣ್ಣ ಹಳ್ಳಿಯಾದ ಯರುಕೋಣೆಯಲ್ಲಿದೆ ಈ ಮನೆ.

19ನೇ ಶತಮಾನದಲ್ಲಿ ಕೃಷಿ ಜಮೀನಿನ ಪಕ್ಕದಲ್ಲೇ ಕಟ್ಟಲಾದ ಈ ಮನೆಯ ಹೊರಗೆ ಅಗಲವಾದ ಚಾವಡಿಗಳಿವೆ. ಕೃಷಿ ಕೂಲಿಯವರು ಅಲ್ಲೇ ಊಟ ಮಾಡಲು ಕುಳಿತುಕೊಳ್ಳುತ್ತಿದ್ದರು. ಹಳೇ ಕಾಲದ ಬಟ್ಟೆಗಳನ್ನು ಜೋಡಿಸಿ ಇಡುವ ಮರದ ಸ್ಟ್ಯಾಂಡ್, ಮರದ ಲೋಟ, ಬಟ್ಟಲು, ಪಾತ್ರೆ, ಪೆಟ್ಟಿಗೆಗಳನ್ನು ಇಂದಿಗೂ ಕಾಯ್ದಿಡಲಾಗಿದೆ.

ಕಾಲಕ್ರಮೇಣ ಆಸ್ತಿ ಪಾಲಾಗಿ ಕುಟುಂಬದ ಸದಸ್ಯರು ಬೇರೆ ಮನೆಗಳನ್ನು ಕಟ್ಟಿಕೊಂಡರು. ಈ ದೊಡ್ಡಮನೆಯ ನಿರ್ವಹಣೆ ಕಷ್ಟವಾಯಿತು. ಮಣಿಪಾಲದ ಹಸ್ತ ಶಿಲ್ಪ ಟ್ರಸ್ಟ್ ಈ ಮನೆಯನ್ನು ಸ್ವಾಧೀನಪಡಿಸಿಕೊಂಡು ಪುನರ್ ನಿರ್ಮಾಣ ಮಾಡುವಲ್ಲಿ ಆಸಕ್ತಿ ವಹಿಸಿತು. ಮನೆಯ ಒಳ ಜಗಲಿಯಲ್ಲಿ ಊಟದ ಕೋಣೆ ಸಹಿತ ಎರಡು ಕೋಣೆಗಳಿವೆ.

## ಕುಂಜೂರು ಚೌಕಿಮನೆ

ಕೇರಳದ ಶಿವಳ್ಳಿ ಬ್ರಾಹ್ಮಣರಾದ ಅಯ್ಯಪ್ಪ ನಾರಾಯಣ ಎನ್ನುವವರು 19ನೇ ಶತಮಾನಕ್ಕೂ ಮೊದಲೇ ಕಟ್ಟಿಸಿದ ಮನೆಯಿದು. ಕೇರಳದಿಂದ ಹಡಗಿನ ಮೂಲಕ ಉಡುಪಿ ಜಿಲ್ಲೆಯ ಉಚ್ಚಿಲಕ್ಕೆ ಬಂದವರು ಈ ಕುಟುಂಬದ ಪೂರ್ವಜರು.

ಕೇರಳದಲ್ಲಿ 15ನೇ ಶತಮಾನದಲ್ಲಿ ಕಂಡುಬಂದ 'ಮನುಶಾಲ್ಯ ಚಂದ್ರಿಕ' ಎಂಬ ವಾಸ್ತುಶೈಲಿಯನ್ನು ಬಳಸಿ ಮನೆ ನಿರ್ಮಿಸಲಾಗಿದೆ. ಮನೆಯ ಮಧ್ಯಭಾಗದಲ್ಲಿ ಚೌಕಾಕಾರದ ಚಾವಡಿಯನ್ನು ಹೊಂದಿರುವ ಕಾರಣ 'ಚೌಕಿಮನೆ' ಎಂದೇ ಪ್ರಸಿದ್ಧವಾಗಿದೆ. ಹಳೇ ಕಾಲದಲ್ಲಿ ಮದುವೆ, ಉಪನಯನ, ಜನ್ಮಾಷ್ಟಮಿ, ಗಣೇಶ ಚತುರ್ಥಿ, ನವರಾತ್ರಿಗಳನ್ನು ಈ ಮನೆಯ ಒಳಗೇ ಆಚರಿಸುತ್ತಿದ್ದರು.

1958ರ ಹೊತ್ತಿಗೆ ಪುಟ್ಟಮ್ಮಬಾಯಿ ಎಂಬವರ ಕುಟುಂಬ ಇಲ್ಲಿ ವಾಸಿಸುತ್ತಿತ್ತು. ಆ ಬಳಿಕ ಮನೆ ಶಿಥಿಲವಾಗತೊಡಗಿತು. ಪುಟ್ಟಮ್ಮಬಾಯಿ ಮಗಳೊಂದಿಗೆ ಬೆಂಗಳೂರಿಗೆ ತೆರಳಿದರು. ಈ ಮನೆಯಲ್ಲಿ ಶ್ರೀಧರ ರಾವ್, ಶ್ರೀನಿವಾಸ ಮೂರ್ತಿ ಮತ್ತು ಮಾಧವ ರಾವ್ ಎಂಬವರ ಮೂರು ತಲೆಮಾರುಗಳು ವಾಸವಾಗಿದ್ದವು.

ಎರಡು ಅಂತಸ್ತಿನ ಈ ಮನೆಯ ಚೌಕಾಕಾರದ ಚಾವಡಿಯ ಮಧ್ಯಭಾಗದಲ್ಲಿ ಗ್ರಾನೈಟ್ ಕಲ್ಲು ಹಚ್ಚಿರುವ ತೆರೆದ ಆಕೃತಿಯೊಂದಿದೆ. ಈ ಚೌಕಾಕಾರದ ಗುಂಡಿಯಲ್ಲಿ ಸೂರ್ಯನ ಕಿರಣಗಳು ಮಾತ್ರವಲ್ಲದೇ ಮಳೆಗಾಲದಲ್ಲಿ ನೀರು ಮೇಲಿನಿಂದ ಕೆಳಕ್ಕೆ ಬೀಳುವಂತೆ ವ್ಯವಸ್ಥೆ ಮಾಡಲಾಗಿದೆ. ಗುಂಡಿಯಲ್ಲಿ ನೀರು ತುಂಬಿದ ಬಳಿಕ ಶುದ್ಧ ನೀರನ್ನು ಉಪಯೋಗಿಸಿ ಕೊಳಕು ನೀರು ಹೊರ ಹೋಗಲು ವ್ಯವಸ್ಥೆ ಇದೆ. ಇದನ್ನು ನಾಲುಕೆಟ್ಟು ಶೈಲಿ ಎನ್ನುತ್ತಾರಂತೆ.

ಮೊದಲ ಮಹಡಿಯ ಚೌಕಾಕಾರದ ಕಿಟಕಿಗಳು 6 ಅಡಿ ಎತ್ತರವಿದೆ. ಸಣ್ಣ ಅಡ್ಡ ಹಲಗೆಯನ್ನಿಟ್ಟು ಗಾಳಿ, ಬೆಳಕು ನಿರಂತರವಾಗಿ ಒಳಗೆ ಬರುವಂತೆ ಮಾಡಲಾಗಿದೆ. ಕಿಟಕಿ ಮೂಲಕ ಜಮೀನಿನಲ್ಲಿ ಬೆಳೆದಿರುವ ಭತ್ತ, ತೆಂಗಿನ ಮರ, ಅಡಿಕೆ ಮರದ ತೋಟವನ್ನು ನೇರವಾಗಿ ನೋಡಬಹುದು.

ಪೂರ್ವದಲ್ಲಿ ಅಡಿಗೆ ಮನೆ, ಈಶಾನ್ಯ ಮತ್ತು ಉತ್ತರದ ನಡುವಲ್ಲಿ ಊಟದ ಕೋಣೆಯಿದೆ. ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಮನೆಯ ಮಧ್ಯಭಾಗದಲ್ಲಿ ತೆರೆದ ಬಾಗಿಲಿನ ದೇವರ ಕೋಣೆಯನ್ನು ಮರದಿಂದಲೇ ರಚಿಸಲಾಗಿದೆ.

ಮುಟ್ಟಾದ ಮಹಿಳೆಯರು ಕುಳಿತುಕೊಳ್ಳಲೆಂದೇ ವಿಶೇಷವಾದ ಕೋಣೆ ಹಾಗೂ ಅಡುಗೆ ಮನೆ ಇದೆ. ದಕ್ಷಿಣದ ಮೂಲೆಯಲ್ಲಿ ಇರುವ 18 ಅಡಿ ಎತ್ತರದ ದೊಡ್ಡ ಮರದ ಕಂಬ ಮನೆಯ ಸೌಂದರ್ಯವನ್ನು ಇಮ್ಮಡಿಸಿದೆ.

ಅಟ್ಟದ ಮೇಲೆ ಕಲ್ಲಿನಿಂದ ನಿರ್ಮಿಸಿದ ದೊಡ್ಡ ಕೋಣೆಯಿದ್ದು. ಮರದ ಹಲಗೆ ಹಾಸಲಾಗಿದೆ. ಭತ್ತ, ಅಕ್ಕಿ, ಗೋಧಿಗಳನ್ನು ಹುಳಹುಪ್ಪಟೆಗಳಿಂದ ರಕ್ಷಿಸಿ ಸಂಗ್ರಹಿಸಲು ಈ ವ್ಯವಸ್ಥೆ. ಕಲ್ಲಿನ ಪೆಟ್ಟಿಗೆ, ಮರದ ಪೆಟ್ಟಿಗೆ, ಮರದ ಪಾತ್ರೆ ಮುಂತಾದ ವಿಶಿಷ್ಟ ಸಂಗ್ರಹಗಳಿವೆ.

ಹಳೇ ಮನೆಗಳ ನಿರ್ವಹಣೆ ಬಲು ಕಷ್ಟ. ವಿಭಕ್ತ ಕುಟುಂಬಗಳ ಈ ಕಾಲದಲ್ಲಿ ಈ ಮನೆಗಳು ಮ್ಯೂಸಿಯಂ ಆಗಿ ಉಳಿದಿರುವುದೇ ಹೆಚ್ಚು.